# Kannada kalike Certificate Course Report 2020-2021

**Title of the Course:** Kannada Kalike

**Date of Commencement:** 22.2.2020 / 20.3.2020

**Course Facilitator:** Prof. Veena N & Dr Shantharaju

## ಗುರಿ ಮತ್ತು ಉದ್ದೇಶಗಳು

- ಕನ್ನಡ ಬಾರದ ವಿದ್ಯಾರ್ಥಿಗಳಿಗೆ ಕನ್ನಡವನ್ನು ಕಲಿಸುವುದು
- ಕನ್ನಡ ಬಾರದ ಅಧ್ಯಾಪಕರಿಗೆ ಕನ್ನಡ ಕಲಿಸುವುದು
- ಕನ್ನಡ ಭಾಷಾ ಪರಿಚಯ
- ಕನ್ನಡ ವ್ಯಾಕರಣ ಪರಿಚಯ
- ಪದಗಳ ಉಚ್ಚಾರಣೆಯ ಪರಿಚಯ
- ಸರಳ ಪದಗಳ ಪರಿಚಯ
- ಪ್ರಾಯೋಗಿಕವಾದ ಪ್ರಯತ್ನ

## ಕನ್ನಡ ಕಲಿಕೆಯ ಪ್ರಾಮುಖ್ಯತೆ:

ಸಂತ ಫ್ರಾನ್ಸಿಸ್ ಡಿ-ಸಾಲೇಸ್ ಕಾಲೇಜಿನ ಕನ್ನಡ ವಿಭಾಗವು 2016-17 ನೇ ಸಾಲಿನಿಂದ ಕನ್ನಡೇತರರಿಗೆ ಕನ್ನಡವನ್ನು ಕಲಿಸುವ ಆ ಮೂಲಕ ಭಾಷೆಯನ್ನು ಬೆಳೆಸುವ ಕಾರ್ಯಗಾರದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದು ಹೆಮ್ಮೆಯ ಸಂಗತಿ. 2016 ನೇ ಸಾಲಿನಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಎಲ್. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾದ ಈ ಕಲಿಕೆಯು ಇಂದಿನ ಉತ್ತಮ ಅಭ್ಯಾಸಕ್ರಮದಲ್ಲೊಂದಾಗಿದೆ. ನಮ್ಮ ಕಾಲೇಜಿನಲ್ಲಿ ವಿವಿಧ ರಾಜ್ಯ, ರಾಷ್ಟ್ರಗಳಿಂದ ಬಂದಿರುವ ವಿದ್ಯಾರ್ಥಿಗಳನಗನ್ನು ಹೊಂದಿದ್ದು, ಪುಟ್ಟ ಪ್ರಪಂಚದ ಸ್ವರೂಪವನ್ನು ಪಡೆದಿದೆ. ಕನ್ನಡಿಗನು ಕನ್ನಡೇತರ ವಿದ್ಯಾರ್ಥಿಗಲಿಗೆ ಕನ್ನಡವನ್ನು ಕಲಿಸುವುದು ಕನ್ನಡ ಭಾಷೆಗೆ ಹಾಗೂ ಕರ್ನಾಟಕ ರಾಜ್ಯಕ್ಕೆ ನೀಡುವ ಅಪಾರವಾದ ಗೌರವವಾಗಿದೆ. ಹಾಗಾಗಿ ಕನ್ನಡ ಬಾರದವರಿಗೆ ಭಾಷೆಯ ವಿವಿಧ ಮಜಲುಗಳನ್ನು



Electronics City P.O., Bengaluru - 560 100
Tel : 080-27836065 / 27834611, Fax : 080-27832299, Email : sfscollege.ecity@gmail.com | sfscollege@rediffmail.com
www.sfscollege.in

Desalite

ಪರಿಚಯಿಸಲಾಯಿತು. ವ್ಯಾಕರಣ, ಸರಳ ಪದಗಳ ಉತ್ಪತ್ತಿ ಹಾಗೂ ಉಚ್ಚಾರಣೆ, ಪ್ರಾಯೋಗಿಕವಾದ ಪ್ರಯತ್ನದ ಮೂಲಕ ಕನ್ನಡ ಕಲಿಸುವಲ್ಲಿ ಯಶಸ್ಸನ್ನು ಪಡೆಯಲಾಯಿತು.

## ಕೋರ್ಸ್ ನ ವಿತರಣೆ

"ಕನ್ನಡ ಕಲಿಕೆ" ಎಂಬ ಸರ್ಟಿಫಿಕೇಟ್ ಕೋರ್ಸ್ ಅನ್ನು ದಿನಾಂಕ ೨೦ ಫೆಬ್ರುವರಿ ೨೦೨೦ ರಂದು ಪ್ರಾರಂಭ ಮಾಡಲಾಯಿತು. ಪ್ರೊ. ವೀಣಾ ಮತ್ತು ಡಾಕ್ಟರ್ ಶಾಂತರಾಜುರವರು ಕೋರ್ಸಿನ ಒಟ್ಟಾರೆ ನಿರ್ವಹಣೆಯ ಜವಾಬ್ದಾರಿಯನ್ನು ತೆಗೆದುಕೊಂಡಿದ್ದರು. ಕನ್ನಡ ಭಾಷೆಯನ್ನು ಬಲ್ಲ ಇತರ ಅಧ್ಯಾಪಕರ ನೆರವನ್ನೂ ಸಹ ಪಡೆದು ಇಂಗ್ಲಿಷ್ ಮತ್ತು ಕನ್ನಡ ಎರಡೂ ಭಾಷೆಗಳಲ್ಲಿ ಸುಲಭವಾಗಿ ಕನ್ನಡವನ್ನು ಕಲಿಸಿ ಕೊಡಲಾಯಿತು. ಒಟ್ಟಾರೆ ೩೫ ವಿದ್ಯಾರ್ಥಿಗಳು ಈ ಕೋರ್ಸಿಗೆ ನೊಂದಣಿಯನ್ನು ಪಡೆದುಕೊಂಡಿದ್ದು ೧೮ ವಿದ್ಯಾರ್ಥಿಗಳು ಈ ಕೋರ್ಸನ್ನು ಅಕ್ಟೋಬರ್ ತಿಂಗಳಿನಲ್ಲಿ ಯಶಸ್ವಿಯಾಗಿ ಪೂರ್ಣಗೊಳಿಸಿದರು. ವಿದ್ಯಾರ್ಥಿಗಳಿಗೆ ನಿಯೋಜಿತ ಕಾರ್ಯಗಳನ್ನು ನೀಡುವುದರ ಜೊತೆಗೆ ಲಿಖಿತ ಮತ್ತು ಮೌಖಿಕ ಪರೀಕ್ಷೆಗಳನ್ನು ನಡೆಸಲಾಗಿತ್ತು.

## ಕಲಿಕೆಯ ಫಲಿತ :

- ಕಡಿಮೆ ಸಮಯದಲ್ಲಿ ಸಾಮಾನ್ಯ ಕನ್ನಡವನ್ನು ಕಲಿಸಲಾಯಿತು.
- ಇಂಗ್ಲೀಷ್ ಪದಗಳ ಸಹಾಯದೊಂದಿಗೆ ಕನ್ನಡವನ್ನು ಮತ್ತಷ್ಟು ಸರಳವಾಗಿ ಅರ್ಥ ಮಾಡಿಸಲಾಯಿತು.
- ಪ್ರತಿ ದಿನ ಒಂದೊಂದು ಹೊಸ ಪದಗಳನ್ನು ಹಾಗೂ ವಾಕ್ಯಗಳನ್ನು ಹೇಗೆ ರಚಿಸಬೇಕು ಎಂಬುದನ್ನು ಕಲಿತರು.
- ವಿಶೇಷವೆಂದರೆ ಕನ್ನಡ ಬಾರದ ಸಹಾಯಕ ಪ್ರಾಧ್ಯಾಪಕರೂ ಕೂಡ ಸರಳವಾಗಿ ಹೇಗೆ ಕನ್ನಡವನ್ನು ಮಾತನಾಡಬೇಕೆಂದು ಕಲಿತುಕೊಂಡರು.
- ಕನ್ನಡ ಪ್ರಾಧ್ಯಾಪಕರಲ್ಲದ ಇತರ ವಿಭಾಗದ ಕನ್ನಡಿಗರಾದ ಪ್ರಾಧ್ಯಾಪಕರೂ ಸಹಾ ಈ ಅಭ್ಯಾಸಕ್ರಮದಲ್ಲಿ ತಮ್ಮನ್ನು ತೊಡಗಿಸಿಕೊಂಡು ಯಶಸ್ಸಿಗೆ ಕಾರಣರಾದರು.

PRINCIPAL
St. Francis de Sales College
Electronics City Post, Bangalore - 560 100.